17

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 24/06/20

# ಬಿಹಾರ: ಆರ್‌ಜೆಡಿಯ ಐವರು ಜೆಡಿಯು ಸೇರ್ಪಡೆ

ಉ.ವಾ 24/6/20

- ವಿಧಾನಸಭೆ ಚುನಾವಣೆಗೆ ಮುನ್ನ ಆರ್‌ಜೆಡಿಗೆ ಆಘಾತ
- ಪಕ್ಷ ಎಂಟು ಮಂದಿ ಪರಿಷತ್ ಸದಸ್ಯರ ಪೈಕಿ ಉಳಿದವರು ಮೂವರು
- ಪಕ್ಷದ ಸಂಸ್ಥಾಪಕ ಸದಸ್ಯ ರಘುವಂಶ ಪ್ರಸಾದ್ ಸಿಂಗ್ ಕೂಡಾ ತ್ಯಾಗಪತ್ರ ಸಲ್ಲಿಕೆ

ಪಾಟ್ನಾ: ಬಿಹಾರದ ವಿಧಾನಸಭೆಗೆ ಅಕ್ಟೋಬರ್-ನವೆಂಬರ್‌ನಲ್ಲಿ ಚುನಾವಣೆ ನಡೆಯಲಿರುವಂತೆಯೇ, ಪ್ರತಿಪಕ್ಷ ಆರ್‌ಜೆಡಿಗೆ ಹಿನ್ನಡೆಯಾಗಿದೆ. ಬಿಹಾರ ವಿಧಾನ ಪರಿಷತ್‌ನ 8 ಶಾಸಕರ ಪೈಕಿ ಐವರು ಮಂಗಳವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಆಡಳಿತಾರೂಢ ಜೆಡಿಯು ಸೇರಿದ್ದಾರೆ. ಇದೇ ವೇಳೆ, ಆರ್‌ಜೆಡಿ ರಾಷ್ಟ್ರೀಯ ಉಪಾಧ್ಯಕ್ಷ ರಘುವಂಶ ಪ್ರಸಾದ್ ಸಿಂಗ್ ಕೂಡ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಆರ್‌ಜೆಡಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಖಮರ್ ಆಲಮ್, ಸಂಜಯ್ ಪ್ರಸಾದ್, ರಾಧಾ ಚರಣ್ ಸೇಠ್, ರಣವಿಜಯ್ ಕುಮಾರ್ ಸಿಂಗ್ ಮತ್ತು ದಿಲೀಪ್ ರೈ ಪರಿಷತ್ ಸ್ಥಾನಗಳಿಗೆ ರಾಜೀನಾಮೆ ನೀಡಿದವರು.

ವಿಧಾನ ಪರಿಷತ್‌ನ ಹಂಗಾಮಿ ಸಭಾಧ್ಯಕ್ಷ ಅವಧೇಶ್ ನರೈನ್ ಸಿಂಗ್ ಅವರನ್ನು ಭೇಟಿ ಮಾಡಿ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ರಾಜೀನಾಮೆ ಅಂಗೀಕರಿಸಿ, ಪ್ರತ್ಯೇಕ ಗುಂಪು ಎಂದು ಮಾನ್ಯ ಮಾಡಲು ಮತ್ತು ಜೆಡಿಯುನಲ್ಲಿ ವಿಲೀನಗೊಳ್ಳಲು ಅನುಮತಿ ನೀಡಲಾಗಿದೆ ಎಂದಿದ್ದಾರೆ.